ಶ್ರೀ ಎಚ್. ಸಿ. ಬೋರಯ್ಯ.—ನಾನಾಗಲೇ ತಿಳಿಸಿದಂತೆ ನಾವು ರೂಲ್ಸ್ ಮಾಡಿರುತ್ತೇವೆ ಅದನ್ನು ಪಬ್ಲಿಷ್ ಕೂಡ ಮಾಡಿದ್ದೇವೆ. ಅದರ ಪ್ರಕಾರವಾಗಿ ಕಾರ್ಯಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ನಮ್ಮ ರಾಜ್ಯದಲ್ಲಿ ಬೆಳೆಯುವ ದ್ರಾಕ್ಷಿಹಣ್ಣು ಹುಳಿ ಜಾಸ್ತಿಯಾಗಿರುತ್ತದೆ. ಹುಳಿ ಕಡಮೆ ಮಾಡಲು ಏನಾದರೂ ಸಂಶೋಧನೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ಸ್ವಾಮಿ ?

ಶ್ರೀ ಎಚ್. ಸಿ. ಬೋರಯ್ಯ.—ಅಂಥ ಯೋಚನೆ ಯಾವುದೂ ಇಲ್ಲ.

Extent of land irrigated by Krishnarajasagar Dam and its channels

*Q.—103. Sri S. RUDRAPPA (Kalgi).—

Will the Government be pleased to state :—

(*a*) the extent of land irrigated by Krishnarajasagar Dam and its channels ;

(*b*) what is the rate of water rate, betterment levy under the above Project ;

(*c*) the total amount collected so far ;

(*d*) the amount outstanding ;

(*e*) the names of districts in which heavy arrears of water rate and betterment levy are outstanding ?

A.—Sri ALUR HANUMANTHAPPA (Deputy Minister for Minor Irrigation) [on behalf of SRI S. NIJALINGAPPA (Chief Minister)].—

(*a*) 1,16,617 acres ;

(*b*) Water rate : Rs. 10 per acre ;
Betterment levy : Rs. 100 to Rs. 150 per acre.

(*c*) Water rate : Rs. 1,85,15,250-67 ;
Contribution : Rs. 1,21,81,976-95.

(*d*) Water rate : Rs. 19,74,299-00 ;
Contribution Rs. 6,53,180-62.

(*e*) Mandya and Mysore Districts.

Sri S. RUDRAPPA.—With reference to (*d*), may I know since how many years the amount has been outstanding ?

† Sri ALUR HANUMANTHAPPA.—I cannot say off-hand. I have furnished the amount outstanding. If the Hon'ble Member wants more details, I will furnish the details.

Sri S. RUDRAPPA.—What are the special measures taken by the Government to recover the outstanding amount ?

Sri ALUR HANUMANTHAPPA.—The Revenue authorities will take necessary steps to recover the arrears due with regard to the water rate and contribution. Sometimes, they take coersive steps also.

Mr. SPEAKER.—He is not asking for the procedure that might be followed. He wants to know the measures taken by the Government to recover the outstanding amount. If the Government have not taken any steps, they may say so. If the Government have taken any steps they can furnish the details.

Sri ALUR HANUMANTHAPPA.—Full details are not available with me at present.

Sri G. V. GOWDA.—What is the total amount by way of betterment levy due to be recovered from the ryots ?

Sri ALUR HANUMANTHAPPA.—The outstanding dues plus the amount collected so far is the total amount of contribution.

Sri S. SIVAPPA.—In view of the fact that the outstanding dues in Mandya District is very meagre, will the Government think of doing away with these dues ?

Sri ALUR HANUMANTHAPPA.—How can we think of waiving the dues ? There are a number of pick-ups and we have to construct a number of pick-ups at the tail-end and therefore, contribution and levy have to be paid to the Government.

ಶ್ರೀ ಎಸ್. ಶಿವಪ್ಪ.—ಮಂಡ್ಯ ಜಿಲ್ಲೆಯಲ್ಲಿ ಬಹಳ ವರ್ಷಗಳಿಂದ ಬಾಕಿ ಇರುವುದರಿಂದ ಅದನ್ನು ಏಕೆ ಮನ್ನಾ ಮಾಡಬಾರದು ?

Mr. SPEAKER.—It is a continuing process.

Sri V. S. PATIL.—May I know what is the expenditure incurred by the Government for this scheme ?

Sri ALUR HANUMANTHAPPA.—For the entire project during 1962-63 the expenditure is Rs. 6,05,18,651.

Sri V. M. DEO.—Is the total irrigation capacity fully utilised with reference to this Dam ?

Sri ALUR HANUMANTHAPPA.—It has been fully utilised.

ಶ್ರೀ ಕೆ. ಎ. ಬೈರೇಗೌಡ.—ಕೃಷ್ಣರಾಜಸಾಗರ ಯೋಜನೆಯಲ್ಲಿ ಪ್ರಾರಂಭದಲ್ಲಿ ಅಲ್ಲಿನ ಜನಗಳಿಗೆ ಸಾಕಾದಷ್ಟು ಸೌಕರ್ಯಗಳನ್ನು ಕೊಡದೆ ಇದ್ದುದರಿಂದ ಬಾಕಿ ನಿಲ್ಲಿಸಿಕೊಂಡಿದ್ದಾರೆ ಎಂಬ ವಿಚಾರವು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಪ್ರಾರಂಭದಲ್ಲಿ ಸಾಲಗಳನ್ನು ತೆಗೆಯುವುದು ಮುಂತಾದ ಕೆಲಸಗಳು ಆಗುವುದರಲ್ಲಿ ಸ್ವಲ್ಪ ನಿಧಾನವಾಯಿತು ಎಂದು ತಿಳಿದುಕೊಂಡಿದ್ದೇನೆ. ಆದರೆ ಈಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರು ಕೊಡಬೇಕಾದ ಬಾಕಿಯನ್ನು ಆದಷ್ಟು ಬೇಗ ಕೊಡಬೇಕು.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ಎಷ್ಟು ವರ್ಷಗಳ ಅವಧಿಯಲ್ಲಿ ಈ ಹಣ ಬಾಕಿ ನಿಂತಿದೆ ಎಂಬುದನ್ನು ಹೇಳುತ್ತೀರಾ ?

Sri ALUR HANUMANTHAPPA.—Since the time of the construction of the Dam, *i.e.* 37 years.

ಶ್ರೀ ಎ. ಮಸಿಯಪ್ಪ.—ಬೆಟರ್‌ಮೆಂಟ್ ಲೆವಿಯನ್ನು ನೂರು ರೂಪಾಯಿಗಳಿಂದ ನೂರೈವತ್ತು ರೂಪಾಯಿಗಳವರೆಗೆ ಗೊತ್ತುಮಾಡಿದೆ ಎಂದು ಹೇಳಿದ್ದೀರಿ, ಯಾವ ಯಾವ ಪ್ರದೇಶದಲ್ಲಿ ನೂರು ಮತ್ತು ಯಾವ ಪ್ರದೇಶದಲ್ಲಿ ನೂರೈವತ್ತು ರೂಪಾಯಿ ?

ಶ್ರೀ ಆಲೂರು ಹನುಮಂತಪ್ಪ.—ಯಾವ ಪ್ರದೇಶದಲ್ಲಿ ಕೆರೆ ಇರುತ್ತದೆಯೋ ಅಲ್ಲಿ ಮೊದಲೇ ಕೊಟ್ಟಿರುತ್ತಾರೆ, ಅದಕಾರಣ ಅಂತಹ ಪ್ರದೇಶವನ್ನು ಬಿಟ್ಟು ಬಾಕಿ ಪ್ರದೇಶದಲ್ಲಿ 150 ರೂಪಾಯಿ ವರೆಗೆ ಇದೆ.

ಶ್ರೀ ಎಚ್. ಹುಚ್ಚಮಾಸ್ತಿ ಗೌಡ.—ಬಾಕಿ ವಸೂಲಾಗಬೇಕಾಗಿರುವ ಹಣ ಗದ್ದೆ ಮಾಡುವುದಕ್ಕಾಗದೇಯಿರುವ ಪ್ರದೇಶವಾಗಿದ್ದು ಈ ಬಗ್ಗೆ ತಕರಾರು ಇರುವ ಪ್ರದೇಶಕ್ಕೆ ಸಂಬಂಧಪಟ್ಟದ್ದೋ ಅಥವಾ ಬೇರೆಯೋ ?

ಶ್ರೀ ಆಲೂರು ಹನುಮಂತಪ್ಪ.—ಇದೆಲ್ಲವೂ ಪೂರ್ತಿಯಾಗಿ ಅಬಾದಾಗಿ ಅಭಿವೃದ್ಧಿಯಾಗಿರತಕ್ಕ ಪ್ರದೇಶಕ್ಕೆ ಸಂಬಂಧಪಟ್ಟುದೆಂದು ನಾನು ತಿಳಿದುಕೊಂಡಿದ್ದೇನೆ.